# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ 12-08-2022

## ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 139/2022 ಕಲಂ 379 ಐಪಿಸಿ :-

ದಿನಾಂಕ 11/08/2022 ರಂದು 1845 ಗಂಟೆಗೆ ಫಿರ್ಯಾದಿ ಶ್ರೀ. ಗೋವಿಂದ ತಂದೆ ಭೀಮಶಾ ಮೆಕಾಲೆ ವಯ:58 ವರ್ಷ ಜಾತಿ:ಗೊಲ್ಲಾ ಉ:ಡಿವಿಜನಲ ವರ್ಕ ಸೂಪರಿಂಟೆಂಡೆಂಡ(ಡಿಡಬ್ಲುಎಸ್) ಸಾ/ತಾಜ ಕಾಲೋನಿ ಬಸವಕಲ್ಯಾಣ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ಸಲ್ಲಿಸಿದರ ಸಾರಾಂಶವೆನೆಂದರೆ ಇವರು ದಿನಾಲು ಬಸವಕಲ್ಯಾಣದಿಂದ ಕರ್ತವ್ಯದ ಸಲುವಾಗಿ ಬೀದರಕ್ಕೆ ಬಂದು ಸಾಯಂಕಾಲ ಮರಳಿ ಹೋಗುತ್ತಾರೆ ಹೀಗಿರುವಾಗ ದಿನಾಂಕ 05/08/2022 ರಂದು ಸಾಯಂಕಾಲ 5:00ಪಿ.ಎಮ್. ಗಂಟೆಯ ಸಮಯಕ್ಕೆ ಎಲ್ಲಾ ಕೆಲಸಗಾರರು ಮನೆಗೆ ಹೋದ ನಂತರ ಇವರು ಮನೆಗೆ ಹೋಗುವಾಗ ವರ್ಕಶಾಪನಲ್ಲಿ 03 ಕೌಂಟರ ಶಾಫ್ಟ ಅಸೆಂಬ್ಲಿ, ಮೂರು ಟಾಪ ಕವರ, ಹಾಗು ವಾಹಾನದ ಬಿಡಿಭಾಗಗಳು, ಹಾಗು ಇತರೆ ಸಾಮಾನುಗಳು ಇದ್ದವು. ಮನೆಗೆ ಹೋಗುವಾಗ ಸೆಕ್ಯೂರಿಟಿಗಾರ್ಡ ರವರಾದ ಶ್ರೀ. ಸಂಗಮೇಶ ರವರು ಕರ್ತವ್ಯದಲ್ಲಿ ಇದ್ದರು, ರಾತ್ರಿ 10:00 ಪಿ.ಎಮ್. ಗಂಟೆಯಿಂದ ಮುಂಜಾನೆ 6:00 ಎ.ಎಮ್. ಗಂಟೆಯ ಅವಧಿಯಲ್ಲಿ ಸೆಕ್ಯೂರಿಟಿ ಗಾರ್ಡ ರವರಾದ ಶ್ರೀ. ಆತ್ಮರಾಮ ಇವರು ಇದ್ದರು. ಮುಂಜಾನೆ 6:00 ಗಂಟೆಯಿಂದ ಶ್ರೀಮತಿ ಭಾಗ್ಯದೇವಿ ರವರು ಕರ್ತವ್ಯದ ಮೇಲೆ ಇರುತ್ತಾರೆ. ದಿನಾಂಕ 06/08/2022 ರಂದು 8:15 ಎ.ಎಮ್. ಗಂಟೆಗೆ ವರ್ಕಶಾಪನಲ್ಲಿ ಮೆಕಾನಿಕ ಕೆಲಸ ಮಾಡುವವರಾದ ಶ್ರೀ. ಸೂಪ್ರಸನ್ನ ಸಹಾಯಕ ಕುಶಲಕರ್ಮಿ ಇವರು ತಿಳಿಸಿದ್ದೇನೆಂದರೆ ವರ್ಕಶಾಪನಲ್ಲಿ ಇರುವ ಇತರೆ ಸಾಮಾನುಗಳಲ್ಲಿ 1) 03 ಕೌಂಟರ ಶಾಫ್ಟ ಅಸೆಂಬ್ಲಿ ಅ.ಕಿ. 15,000/-ರೂ. 2)ಮೂರು ಟಾಪ ಕವರ ಅ.ಕಿ.9,000/-ರೂ. ಹಾಗು 3)ವಾಹಾನದ ಬಿಡಿಭಾಗಗಳು ಅ.ಕಿ.11,000/- ರೂ. ನೇದವು ಕಾಣೆಯಾಗಿದ್ದು ಇರುತ್ತವೆ. ಯಾರೋ ಕಳ್ಳರು ದಿನಾಂಕ 05/08/2022 ರಂದು ಸಾಯಂಕಾಲ 5:00 ಪಿ.ಎಮ್. ಗಂಟೆಯಿಂದ ದಿನಾಂಕ 06/08/2022 ರಂದು 8:15 ಎ.ಎಮ್. ಗಂಟೆಯ ಅವಧಿಯಲ್ಲಿ ಯಾರೋ ಕಳ್ಳರು ನೌಬಾದ ಕೆಕೆಎಸ್.ಆರ.ಟಿ.ಸಿ. ವರ್ಕಶಾಪನಲ್ಲಿ ಇಟ್ಟಿರುವ ಒಟ್ಟು ಅಂದಾಜು 35,000/-ರೂ. ಬೆಲೆಬಾಳುವ ಸಾಮಾನುಗಳನ್ನು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಕೆಕೆಎಸ್.ಆರ.ಟಿ.ಸಿ. ವರ್ಕಶಾಪನಲ್ಲಿ ಕಳವು ಆದ ಬಗ್ಗೆ ನಮ್ಮ ಮೇಲಾಧಿಕಾರಿಯವರಿಗೆ ವಿಚಾರಿಸಿ ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ. ಕಾರಣ ದಿನಾಂಕ 05/08/2022 ರಂದು ಸಾಯಂಕಾಲ 5:00 ಪಿ.ಎಮ್. ಗಂಟೆಯಿಂದ ದಿನಾಂಕ 06/08/2022 ರಂದು 8:15 ಎ.ಎಮ್ ಗಂಟೆಯ ಅವಧಿಯಲ್ಲಿ ನೌಬಾದ ಕೆಕೆಎಸ್.ಟಿ.ಸಿ. ವರ್ಕಶಾಪನಲ್ಲಿ ಇಟ್ಟಿರುವ ಸಾಮಾನುಗಳನ್ನು ಕಳವು ಮಾಡಿಕೊಂಡು ಹೋದ ಅಪರಿಚಿತ ಕಳ್ಳರ ವಿರುದ್ಧ ಕಾನೂನು ಕ್ರಮ ಜರುಗಿಸಿ ಪತ್ತೆ ಮಾಡಿಕೊಡಬೇಕೆಂದು ವಿನಂತಿ. ಅಂತ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಧನ್ನೂರಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 112/2022 ಕಲಂ 457, 380 ಐಪಿಸಿ :-

ದಿನಾಂಕ: 11/08/2022 ರಂದು 1130 ಗಂಟೆಗೆ ಫಿರ್ಯಾದುದಾರರಾದ ರಮೇಶ ತಂದೆ ಬಸವಂತರಾವ ಪಾಟೀಲ ಸಾ: ಅಹಮದಾಬಾದ ರವರು ಠಾಣೆಗೆ ಹಾಜರಾಗಿ ಕನ್ನಡದಲ್ಲಿ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ ಅಹಮದಾಬಾದ ಗ್ರಾಮದಲ್ಲಿ ನಿಟ್ಟೂರ ಅಹಮದಾಬಾದ ಹೋಗುವ ರೋಡಿನ ಪಕ್ಕದಲ್ಲಿ ಇವರು ಕಟ್ಟುತ್ತಿರುಯವ ಮನೆಯ ಪಕ್ಕದಲ್ಲಿ ಒಂದು ತೆಗಡಿನ ಶೆಡ್ ಹಾಕಿಕೊಂಡು ಅದರಲ್ಲಿ ಹೆಂಡತಿ ಮಕ್ಕಳೊಂದಿಗೆ ವಾಸವಾಗಿರುತಾರೆ ಹೀಗಿರುವಲ್ಲಿ ದಿನಾಂಕ 28/07/2022 ರಂದು ಸಾಯಂಕಾಲ 0700 ಗಂಟೆಗೆ ಹೊಲದ ಕೆಲಸ ಮುಗಿಸಿಕೊಂಡು ಮರಳಿ ಮನೆಗೆ ಬಂದು ನಂತರ ಅಂದಾಜು ರಾತ್ರಿ 10:00 ಗಂಟೆ ಸುಮಾರಿಗೆ ನಾನು ಮತ್ತು ನನ್ನ ಮಗ ಇಬ್ಬರು ಹೊಸದಾಗಿ ಕಟ್ಟುತ್ತಿರುವ ಮನೆಯ ಹಾಲಿನಲ್ಲಿ ಮಲಗಿಕೊಂಡಿರುತ್ತೆವೆ. ಹೆಂಡತಿಯಾದ ಸುನೀತಾ ಇವಳು ಮನೆಯ ಪಕ್ಕದಲ್ಲಿ ನಿರ್ಮಿಸಿರುವ ತಗಡಿನ ಶೆಡ್ಡಿನಲ್ಲಿ ಬಾಗಿಲ ಬೋಲ್ಟ ಹಾಕಿಕೊಂಡು ಮಲಗಿಕೊಂಡಿರುತ್ತಾಳೆ. ಹೀಗಿರುವಲ್ಲಿ ದಿನಾಂಕ: 29/07/2022 ರಂದು ಅಂದಾಜು 0100 ಗಂಟೆ ಸುಮಾರಿಗೆ ನನ್ನ ಹೆಂಡತಿ ಸುನೀತಾ ಇವಳು ಚಿರುತ್ತಿದ್ದಾಗ ಎದ್ದು ಬಂದು ಹಂಡತಿಗೆ ವಿಚಾರಿಸಲು ತಿಳೀಸದ್ದೇನೆಂದರೆ, ನಾನು ಒಳಗಡೆ ಮಲಗಿಕೊಂಡಾಗ ಯಾರೋ ನನ್ನ ಕೊರಳಿನಲ್ಲಿರುವ ತಾಳಿ ಎಳಯುತ್ತಿದ್ದಾಗ ಎಚ್ಚರವಾಗಿ ನೋಡಲು ಒಬ್ಬ ವ್ಯಕ್ತಿ ಬಾಗಿಲಿನ ಹತ್ತಿರ ನಿಂತಿದ್ದನು ಇನ್ನೋಬ್ಬ ವ್ಯಕ್ತಿ ನನ್ನ ತಾಳಿ ಕಡಿದುಕೊಂಡು ಓಡಿ ಹೋಗಿರುತ್ತಾನೆ. ಅಂತ ತಿಳಿಸಿರುತ್ತಾಳೆ. ಅಂತಾ ನಿಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.